
**ಮಳೆಗಾಲದಲ್ಲಿ ಮುಳುಗಡೆಯಾಗಿ, ಬೇಸಿಗೆಯಲ್ಲಿ ಕಾಣಸಿಗುವ ಹಾಸನದ ಶೆಟ್ಟಿಹಳ್ಳಿ ಚರ್ಚ್ ಪರಿಸರದಲ್ಲಿ ನೆರೆದ ಛಾಯಾಗ್ರಾಹಕರ ನಿರೀಕ್ಷೆ ಒಂದೇ ಆಗಿತ್ತು – ಆಕಾಶಗಂಗೆಯ ದರ್ಶನ.**









ಸುತ್ತುವಿಕೆಯನುಸಾರ ಈ ನಕ್ಷತ್ರಗಳ ಪ್ರಭಾವಳಿ ನೋಡಬಹುದು. ಈ ಪ್ರಕಾರದ ಛಾಯಾಚಿತ್ರಕ್ಕೆ 20ರಿಂದ 30 ಸೆಕೆಂಡುಗಳ ಅಂತರದಲ್ಲಿ ಸುಮಾರು 300ರಿಂದ 400 ಚಿತ್ರಗಳನ್ನು ತೆಗೆಯಬೇಕಾಗುತ್ತದೆ. ನಂತರ ಎಲ್ಲಾ ಚಿತ್ರಗಳನ್ನು ಕ್ರೋಡೀಕರಿಸಿದರೆ ಅಂತಿಮ ಫಲಿತಾಂಶ ಸಿಗುತ್ತದೆ.

ಚರ್ಚ್ ಪಳೆಯುಳಿಕೆ ಮುಂದಿರಿಸಿ ಧ್ರುವ ನಕ್ಷತ್ರಕ್ಕೆ ಗುರಿಯಿಟ್ಟು ಚಿತ್ರ ತೆಗೆದೆವು. ಸಾಮಾನ್ಯವಾಗಿ ಅಲ್ಲೇ ಡ್ರಾ ಅಲ್ಲೇ ಬಹುಮಾನವೆಂಬಂತೆ ಕ್ಲಿಕ್ಕಿಸಿದ ತಕ್ಷಣವೇ ನಮಗೆ ಫಲಿತಾಂಶ ಕ್ಯಾಮೆರಾ ಸ್ಕ್ರೀನ್ ಮೇಲೆ ಗೋಚರಿಸುತ್ತದೆ. ಆದರೆ ಈ ಛಾಯಾಗ್ರಹಣದಲ್ಲಿ ಕಂಪ್ಯೂಟರ್ ಬಳಸಿ ಎಡಿಟ್ ಮಾಡಿದ ಮೇಲಷ್ಟೇ ಫಲಿತಾಂಶ ಸಿಗುತ್ತದೆ. ಹಾಗೂ ಹೀಗೂ ನಮ್ಮೆಲ್ಲ ಯೂಟ್ಯೂಬ್ ವಿದ್ಯೆ, ಲೇಖನಗಳ ಆಧಾರದ ಮೇಲೆ ಮೊದಲ ಪ್ರಯತ್ನದಲ್ಲೇ ಯಶಸ್ವಿಯಾದೆವು.

ಈಗ ಉಳಿದದ್ದು ಆಕಾಶಗಂಗೆಯ ನೋಟಕ್ಕಿದ್ದ ಕಾತರ. ಪದೇ ಪದೇ ಅಪ್ಲಿಕೇಶನ್‌ನಲ್ಲಿ ಹುಡುಕಾಟ, ಗಾಳಿಯಲ್ಲಿ ಗುಂಡು ಎಂಬಂತೆ ಕ್ಯಾಮೆರಾ ಬಳಕೆ ಮಾಡಿದರೂ ಗಂಗೆಯ ನೋಟ ಕಾಣದಾಯಿತು. ಗಲಿಬಿಲಿಗೊಂಡ ನಾವು ‘ಪ್ರಥಮ ಚುಂಬನಂ ದಂತ ಭಗ್ನಂ’ ಎಂದುಕೊಂಡೆವು. ಡ್ಯಾಮ್ ಹಿನ್ನೀರಿನ ಮೇಲಿಂದ ಬೀಸುತ್ತಿದ್ದ ಥಂಡಿ ಗಾಳಿ ಮೈ ರೋಮವನ್ನೆಲ್ಲ ಗಾಸಿಗೊಳಿಸುತ್ತಿತ್ತು. 11ಕ್ಕೆ ಕಾಣಬೇಕಿದ್ದ ಕ್ಷೀರಪಥ 12.30 ಆದರೂ ಕಾಣದಿದ್ದಾಗ ಮನಸ್ಸು ಪ್ರವಾಸದ ಕಷ್ಟನಷ್ಟದ ಲೆಕ್ಕ ಹಾಕಿದ್ದಂತೂ ಸತ್ಯ.

ಓಹ್, ನಾವೆಲ್ಲ ಉತ್ತರದಲ್ಲಿ ಹುಡುಕುತ್ತಿದ್ದೇವೆ, ಅದು ಆ ಕಡೆ ದಕ್ಷಿಣದಲ್ಲಿದೆ ಎಂಬ ಸುಳಿವನ್ನು ಗೆಳೆಯನೊಬ್ಬ ಕೊಡುವಷ್ಟರಲ್ಲಿ ಅದಾಗಲೇ ಕ್ಷೀರಪಥ ತಲೆ ಮೇಲೆ ಬಂದಾಗಿತ್ತು. ಮೊಟ್ಟ ಮೊದಲ ಬಾರಿಗೆ ಆಕಾಶಗಂಗೆ ಕಂಡ ಖುಷಿ, ಏನೋ ಸಾಧಿಸಿದ ಸಂತಸ! ಬರಿಗಣ್ಣಿಗೆ ಮಾಸಿದ ಕೆಂಬಣ್ಣದ ಉದ್ದನೆಯ ಗೆರೆಯ ಕೃತಿಯಲ್ಲಿ ಕಾಣುತ್ತಿತ್ತು. ಬಗೆಬಗೆಯ ಭಂಗಿಯಲ್ಲಿ, ವಿವಿಧ ಸಂಯೋಜನೆಯೊಂದಿಗೆ ಚಿತ್ರ ತೆಗೆಯಲಾರಂಭಿಸಿದೆವು. ಅಲ್ಲಿಯವರೆಗೂ ಜೊತೆಯಲ್ಲಿದ್ದ ನಾವು, ನಮ್ಮ ಅಭಿರುಚಿಗೆ ತಕ್ಕಂತೆ ಚಿತ್ರಿಸಲು ಚದುರಿಹೋದೆವು.

ಕೊರೆಯುವ ಚಳಿ, ವಿಷಪೂರಿತ ಹಾವುಗಳು, ಹಳ್ಳದಿಣ್ಣೆಗಳು, ಅರೆಬರೆ ಹೊಟ್ಟೆ, ತಡೆ ಹಿಡಿದ ನಿದ್ದೆ, ಪ್ರಾಣಿಗಳ ಭಯ – ಇವನ್ನು ಲೆಕ್ಕಿಸದೆ ಪಟ್ಟ ಪ್ರಯತ್ನದ ಫಲವೇ ಈ ಆಕಾಶಗಂಗೆಯ ಚಿತ್ರಗಳು.

ಭೂಮಿಯೇ ವಿಶ್ವವೆಂದುಕೊಂಡ ನಮಗೆ ಸರಿಸುಮಾರು ನೂರರಿಂದ ಇನ್ನೂರು ಬಿಲಿಯನ್ ಗ್ರಹಗಳು ಕೇವಲ ಇದೊಂದು ಆಕಾಶಗಂಗೆಯಲ್ಲಿ ಅಡಗಿದೆ ಎಂಬ ಸತ್ಯ ತಿಳಿಯಬೇಕಿದೆ. ಈ ರೀತಿಯ ನಕ್ಷತ್ರಪುಂಜ ವಿಶ್ವದಲ್ಲಿ ನೂರು ಬಿಲಿಯನ್‌ನಿಂದ ಎರಡು ಟ್ರಿಲಿಯನ್ ಇದೆ ಎಂಬ ಅಂದಾಜಿನ ಲೆಕ್ಕ ಅರಿಯಬೇಕಿದೆ. ಗುಲಗಂಜಿ ಜ್ಞಾನದಿಂದ ಇಡೀ ಬ್ರಹ್ಮಾಂಡವನ್ನೇ ಆಳುವೆ ಎಂಬ ಅಹಂಕಾರ ಅಡಗಬೇಕಿದೆ. ಇವೆಲ್ಲ ಪಾಠವನ್ನೂ ಪ್ರಕೃತಿಯೇ ನಮಗೆ ಕಲಿಸಿಕೊಡುತ್ತದೆ.

ಪ್ರತಿಕ್ರಿಯಿಸಿ: feedback@sudha.co.in